ಕಣ್ಣುಗಳು ಮಾತನಾಡಿಕೊಂಡಿದ್ದವು. ನಮ್ಮ ಮಾತುಕತೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದ ಚುರುಮುರಿ ಅತ್ತೆ, ಆಕೆಯ ತಂದೆಯ ಬಳಿ ಈ ವಿಷಯವನ್ನು ಪ್ರಸ್ತಾಪಿಸುವುದಾಗಿ ನನಗೆ ಹೇಳಿದಳು. ಆಗಲೇ ನನಗೆ ಅರ್ಥವಾಗಿದ್ದು, ನಾನು ಗುಟ್ಟಾಗಿದೆ ಎಂದುಕೊಂಡಿದ್ದು ಗುಟ್ಟಾಗಿ ಉಳಿದಿಲ್ಲ ಎನ್ನುವ ಸತ್ಯ.

ಕೆಲವು ದಿನಗಳ ಅನಂತರ ನನ್ನ ಕಾಲೇಜಿನ ವಿಳಾಸಕ್ಕೆ ಹೈದರಾಬಾದ್‌ನಿಂದ ಮಾಮಿಯ ಪತ್ರ ಬಂದಿತ್ತು. ಆ ಪತ್ರದ ಸಾರಾಂಶವಿಷ್ಟೇ: ಕಾವ್ಯಾಳ ತಂದೆಗೆ ಆಕೆಯನ್ನು ನನಗೆ ಕೊಟ್ಟು ಮದುವೆ ಮಾಡುವುದು ಇಷ್ಟವಾಗಿಲ್ಲ; ನನ್ನ ಬದಲಿಗೆ ಆಕೆಯನ್ನು ಬೇರೊಬ್ಬನಿಗೆ ಕೊಟ್ಟು ವಿವಾಹ ಮಾಡುವುದಕ್ಕೆ ಆತ ಸಿದ್ಧತೆ ನಡೆಸಿದ್ದಾನೆ. ಆ ಹುಡುಗನ ತಂದೆಯದ್ದು ಒಂದು ಇಟ್ಟಿಗೆಯ ಭಟ್ಟಿಯಿದೆ. ವ್ಯವಹಾರ ಚೆನ್ನಾಗಿ ನಡೆಯುತ್ತಿದೆಯಂತೆ; ಅನುಕೂಲವಾಗಿದ್ದಾರಂತೆ. ಮಗಳನ್ನು ವಿವಾಹ ಮಾಡಿಕೊಡುವುದಕ್ಕೆ ತಂದೆಗೆ ಬೇರೇನು ಬೇಕು!? ಮಾಮಿಯ ಪತ್ರವನ್ನು ಓದಿದ ಅನಂತರ ಕಾವ್ಯಾಳನ್ನು ಮರೆಯುವ ಪ್ರಯತ್ನ ಮಾಡುವುದು ನನಗೆ ಅನಿವಾರ್ಯವಾಯಿತು. ಅದೇ ಕಾವ್ಯಾ ಈಗ ನನ್ನ ಕಣ್ಣುಗಳ ಮುಂದೆ; ಅದೂ ನಮ್ಮದೇ ಮನೆಯಲ್ಲಿ; ಜೊತೆಯಲ್ಲಿ ಆಕೆಯ ಪತಿರಾಯ!

